ಶ್ರೀ ಎಚ್. ಕೆ. ವೀರಣ್ಣಗೌಡ.—ತಮ್ಮ (a) ಮತ್ತು (c) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರ ನೋಡಿ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಚೆಕ್ಕಿಕಲ ಫೀಜಬಲ್ ಅಲ್ಲ ಎಂದರೆ ಇದನ್ನು ಕೈಬಿಟ್ಟಿರ್ದಿರೆಂದು ಅರ್ಥಮಾಡಿ ಕೊಳ್ಳೋಣವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾಲೆಯಿಂದ ಕೆರೆಗೆ ನೀರು ತರುವುದು ಚೆಕ್ಕಿಕಲ ಫೀಜಬಲ್ ಅಲ್ಲ. ಆದ್ದರಿಂದ ಅದನ್ನು ಕೈಬಿಟ್ಟಹಾಗೆ.

ಶ್ರೀ ಎಂ. ಎಂ. ಪಾಟೀಲ್.—ಈ ಕೆರೆಗೆ ನೀರು ಯಾವ ಮಾರ್ಗದಿಂದ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ?

ಶ್ರೀ ಎಚ್. ಕ. ವೀರಣ್ಣಗೌಡ.—ಕೆರೆಗೆ ನೀರು ಒದಗಿಸುವ ಪ್ರಶ್ನೆಯನ್ನು ತಾವು ಕೇಳಲಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ಕೆರೆಗೆ ನೀರು ಒದಗಿಸಿ ಕೊಡಬೇಕು ಎನ್ನುವ ಪ್ರಶ್ನೆ ಇರುವುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲ್ಲಿಂದ ಕೊಡಲು ಆಗುವುದಿಲ್ಲ ಎಂದು ಹೇಳಿದೆ. ಇನ್ನು ಎಲ್ಲಿಂದ ತರಬೇಕು ಎಂಬ ಪ್ರಶ್ನೆ ಕೇಳಲಿಲ್ಲ.

ಶ್ರೀ ಎಸ್. ನುಬ್ಬಯ್ಯನಾಯಕ್.—ಈ ಕೆಲಸವನ್ನು ಕೈಗೊಳ್ಳದಿದ್ದರೆ 1957-58ನೇ ಸಾಲಿನ ಬಜೆಟ್ಟಿನಲ್ಲಿ 3,20,000 ರೂಪಾಯಿಗಳನ್ನು ಏತಕ್ಕೆ ಇಟ್ಟಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಕೇಳುತ್ತಿರುವುದು ನಾನು ಹೇಳುತ್ತಿರುವುದು ಒಂದೇ ಎಂದು ಗೊಂದಲ ಮಾಡಿಕೊಂಡಿದ್ದೀರಿ. ಈ ಹಣ ಮಂಜೂರಾಗಿರುವುದು ಬೊಮ್ಮನಹಳ್ಳಿ ಪ್ರಾಜೆಕ್ಟಿಗೆ ಸಾಧ್ಯವಿಲ್ಲ ಎಂದು ಹೇಳಿರುವುದು ನಾಲೆಯಿಂದ ಕೆರೆಗೆ ನೀರು ತರುವುದು.

Dr. R. NAGAN GOWDA.—May I know whether the estimate of this Bommanahalli project was not prepared by the Madras Government when they had decided that it was financially feasible ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಮದರಾಸ್ ಗೌರ್ನಮೆಂಟಿನವರು ಮಾಡಿದ್ದಾರೆ ಮತ್ತು ನೀರು ಕೆರೆಗೆ ತರುವುದು ಫೀಜಬಲ್ ಅಲ್ಲ ಎಂದು ಹೇಳಿದ್ದಾರೆ.

Dr. R. NAGAN GOWDA.—Financially ಫೀಜಬಲ್ ಎಂದು ತೀರ್ಮಾನವನ್ನು ಅವರು ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದರಿಂದ 4.5 ಪರ್ಸೆಂಟ್ ಉತ್ಪತ್ತಿ ಬರುತ್ತದೆ ಎಂದು ಅಂದಾಜು ಮಾಡಿದ್ದಾರೆ. ಇನ್ನೂ ಹೆಚ್ಚಾಗಿ ಬರುವುದಕ್ಕೆ ಸಾಧ್ಯವೇ ನೋಡಿ ಎಂದು ಸೆಂಟ್ರಲ್ ಗೌರ್ನಮೆಂಟಿನವರು ನಮಗೆ ತಿಳಿಸಿದ್ದಾರೆ.

Dr. R. NAGAN GOWDA.—Do the Government expect more than 4.5 per cent from any project ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರು ಜಾಸ್ತಿ ಬರುತ್ತದೆಯೋ ನೋಡಿ ಎಂದು ಹೇಳಿದ್ದಾರೆ.

Dr. R. NAGAN GOWDA.—Is 4.5 percent return on any irrigation project satisfactory or not ?

Sri H. K. VEERANNA GOWDH.—That is a different question. It is a matter of opinion.

ಶ್ರೀ ಎಂ. ಎಂ. ಪಾಟೀಲ್.—ಒಂದು ಪಕ್ಷ ರಿಟರ್ನ್ ಜಾಸ್ತಿ ಬರುವುದಿಲ್ಲ ಎಂದು ತಿಳಿದುಬಂದರೆ ಈ ಪ್ರಾಜೆಕ್ಟನ್ನು ಕೈಬಿಡೋಣವಾಗುತ್ತದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಹೇಳಲಿಲ್ಲ.

Repairs to the waste weir (kodi) of Devapur Tank.

Q.—323. Sri B. S. SHANKARAPPA (Hosadurga).—

Will the Government be pleased to state :—

(*a*) whether they are aware of the fact that three years have elapsed since the waste weir (Kodi) of Devapur Tank in Madadakere Hobli, Hosadurga Taluk, was breached ;

(*b*) if so, whether any action has been taken in regard to repairs thereto ;

(*c*) if not, whether they would take up the work at least now and complete it ?

A.—Sri H. K. VEERANNA GOWDH (Minister for Public Works).—

(*a*) Yes.

(*b*) Yes.

(*c*) Does not arise in view of replies to (*a*) and (*b*) above.

ಶ್ರೀ ಬಿ. ಎಸ್. ಶಂಕರಪ್ಪ.—(*b*)ಗೆ ಉತ್ತರವಾಗಿ ಹೌದು ಎಂದು ಹೇಳುತ್ತೀರಿ ? ರಿಪೇರಿ ಆದಮೇಲೆ ಒಡೆದು ಹೋಯಿತೇ ?

* ಶ್ರೀ ಎಚ್. ಕೆ. ವೀರಣ್ಣಗೌಡ.—ಮಧ್ಯೆ ಒಡೆದು ಹೋಗಿತ್ತು ಅದನ್ನು ರಿಪೇರಿ ಮಾಡಲಾಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಕೆಲಸ ಪೂರ್ತಿಯಾಗಿ ಆಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲಸ ಪೂರ್ತಿಯಾಗಿ ಆಗಿದೆ. ಆದರೆ ಇತ್ತೀಚೆಗೆ ಕಿತ್ತುಹೋಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಇದು ಈಚೆಗೆ ಕೋಡಿ ಒಡೆದ ಮೇಲೆ ಕೇಳಿರುವ ಪ್ರಶ್ನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೂ ಸಹ ಕೆಲಸ ಪ್ರಾರಂಭಮಾಡುತ್ತೇವೆ. ಸ್ವಲ್ಪ ಕೋಡಿ ಇಳಿಸಬೇಕಾಗಿತ್ತು, ಕೆರೆ ಏರಿ ಬಂದೋಬಸ್ತು ಆಗದೆ ಇರುವುದರಿಂದ ಇಳಿಸಬೇಕಾಗಿತ್ತು. ಆದರೆ ಈಗ ತೂಬಿನ ರಿಪೇರಿ ಆಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಅಮೃತಮಹಲ್ ಕಾವಲು ಸಾಗುಮಾಡುವುದಕ್ಕೋಸ್ಕರ ಕೋಡಿ ಇಳಿಸಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಿಕಾರ್ಡ್ ಇರುವ ಪ್ರಕಾರ ಏರಿ ಬಂದೋಬಸ್ತು ಆಗಿರಲಿಲ್ಲ.